# ಪರ್ಯಾಯ ಶೈಕ್ಷಣಿಕ ಯೋಜನೆ–2021-22

**6ನೇ ತರಗತಿ** **ಆಗಸ್ಟ್ ಮಾಹೆ** **ಪ್ರಥಮ ಭಾಷೆ ಕನ್ನಡ**

| ಕ್ರ.ಸಂ | ತಿಂಗಳು/ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್/<br>1 ನೇ ವಾರ | **ಪದ್ಯ: ಬೇಸಿಗೆ**<br>• ಸ್ವರಭಾರ ಏರಿಳಿತದೊಂದಿಗೆ ಹಾಡಲು ಅರಿಯುವರು.<br>• ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥಮಾಡಿಕೊಂಡು ಓದುವರು.<br>• ಕಂಠಪಾಠ ಮಾಡಿದ ಪದ್ಯವನ್ನು ತಮ್ಮದೇ ರಾಗದಲ್ಲಿ ಹಾಡುವರು.<br>• ಧ್ವನಿ ಸುರುಳಿ ಮುಖಾಂತರ ಮಕ್ಕಳಿಗೆ ಪದ್ಯ ಕೇಳಿಸುವುದು. | • ಹಾವಭಾವಯುಕ್ತವಾಗಿ ಕಥೆಯೊಂದನ್ನ ಹೇಳುವುದು ಮತ್ತು ಹೇಳಿಸುವುದು.<br>• ಸ್ವರಭಾರ ಏರಿಳಿತದೊಂದಿಗೆ ಹಾಡು ಹೇಳಿಕೊಟ್ಟು ಮಕ್ಕಳಿಂದ ಹಾಡಿಸುವುದು.<br>• ಶಿಕ್ಷಕರಿಂದ ಪದ್ಯದ ಮಾದರಿ ವಾಚನ ಧ್ವನಿಸುರುಳಿ ಬಳಸಿ ಪದ್ಯ ಕೇಳಿಸುವುದು.<br>• ಮಕ್ಕಳಿಂದ ಪದ್ಯವನ್ನು ಹೇಳಿಸುವುದು.<br>• ದನ–ಧನ, ಪ್ರದಾನ–ಪ್ರಧಾನ, ಕೃತಜ್ಞತೆ– ಕೃತಘ್ನತೆ, ಪಲ–ಫಲ ಇಂತಹ ಅನೇಕ ಪದಗಳನ್ನು ನಿಘಂಟಿನ ಸಹಾಯದಿಂದ ಅರ್ಥ ವ್ಯಾತ್ಯಾಸ ಅರಿತು ಧ್ವನಿ ವ್ಯತ್ಯಾಸವನ್ನು ತಿಳಿಯುವರು.<br>• ಕವಿ–ಕೃತಿ ಪರಿಚಯ<br>ಬಿ. ಆರ್. ಲಕ್ಷ್ಮಣರಾವ್ | • ಮಗುವು ತನಗೆ ತಿಳಿದ ಹಾಡು ಕಥೆಯನ್ನು ತನ್ನದೇ ಧಾಟಿಯಲ್ಲಿ ಹೇಳುವುದು.<br>• ಮಕ್ಕಳಿಂದ ಪದ್ಯವನ್ನು ಹಾಡಿಸುವುದು,<br>• ಅಭ್ಯಾಸದ ಹಾಳೆ ತಯಾರಿಸಿಕೊಂಡು ಮೌಲ್ಯಮಾಪನ ಮಾಡುವುದು.<br>• ವರ್ಣಮಾಲೆ<br>• ಗುಣಿತಾಕ್ಷರ<br>• ಅಕ್ಷರಬಿಡಿಸಿ ಬರೆಯುವುದು<br>• ಧ್ವನಿ ವ್ಯತ್ಯಾಸ ಪದಗಳ ಅರ್ಥ |

| ಕ್ರ.ಸಂ | ತಿಂಗಳು/ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್/<br>2 ನೇ ವಾರ | • ನಾಟ್ಯಕಲಾ ದುರಂಧರ ಮಹಹಮದ್ ಪೀರ್<br>• ಓದಿದ ವಿಷಯವನ್ನು ಅರ್ಥೈಸಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು. | • ಶಿಕ್ಷಕರ ಮಾದರಿ ಓದು<br>• ಮಹಮದ್ ಪೀರ್ ರವರ ಪರಿಚಯ ಮಾಡಿಕೊಡುವುದು.<br>• ಮಕ್ಕಳಿಂದ ಓದಿಸುವುದು<br>• ನಿರಂತರವಾಗಿ ಸರಳ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುವುದು.<br>ಉದಾ:– ಮೊಹಮದ್ ಪೀರ್ ರವರ ತಂದೆ ತಾಯಿ ಹೆಸರೇನು ?<br>ಮೊಹಮದ್ ಪೀರ್ ರವರು ಅಭಿನಯಿಸಿದ ಮೊದಲ ನಾಟಕ ಯಾವುದು ? ಇತ್ಯಾದಿ | • ಪೂರಕ ಪಾಠದ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರ ಹೇಳಿಸಿ ಬರೆಸುವುದು. |

**ಕನ್ನಡ-6**

## ಅಭ್ಯಾಸದ ಹಾಳೆ

## 1. ಬೇಸಿಗೆ (ಪದ್ಯ)

ಅ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.

1. 'ಬೇಸಿಗೆ' ಪದ್ಯವನ್ನು ಬರೆದ ಕವಿ ---------------
2. 'ಬೇಸಿಗೆ' ಪದ್ಯವನ್ನು --------------- ಎಂಬ ಭಾವಗೀತೆಗಳ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
3. ಭೂಮಿಯ ಪೋಷಕ ----------
4. 'ಕರ್ತವ್ಯ' ಪದದ ಅರ್ಥ ----------
5. ಕನ್ನಡ ವರ್ಣಮಾಲೆಯಲ್ಲಿ ------- ಅಕ್ಷರಗಳಿವೆ.

**ಆ. ಕೆಳಗಿನ ಪದಗಳಲ್ಲಿರುವ ಅಕ್ಷರಗಳನ್ನು ಬಿಡಿಸಿ ಬರೆಯಿರಿ.**

ಉದಾ: | ಸಹಾಯ: ಸ್+ಅ, ಹ್+ಆ, ಯ್+ಅ. |

- ಆಭರಣ :
- ಅರಮನೆ :
- ಆಧಾರ :
- ಕುಡಿದರು :
- ಸಂಭ್ರಮ :

**ಇ. ಕೆಳಗಿನ ಪದಗಳ ಧ್ವನಿವ್ಯತ್ಯಾಸ ಅರಿತು ಅರ್ಥವ್ಯತ್ಯಾಸ ಅರಿತು ಅರ್ಥವ್ಯತ್ಯಾಸ ತಿಳಿದು ಬರೆಯಿರಿ.**

| | |
|---|---|
| ಆಡು – | ಪ್ರದಾನ – |
| ಹಾಡು – | ಪ್ರಧಾನ – |

| ಕ್ರ.ಸಂ | ತಿಂಗಳು/ವಾರ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | ಆಗಸ್ಟ್/<br>3 ನೇ ವಾರ<br><br>4 ನೇ ವಾರ | **ಗದ್ಯ: ದೊಡ್ಡವರ ದಾರಿ**<br>• ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿಖರವಾಗಿ ಮಾತನಾಡುವರು.<br>• ಡಾ. ರಾಜೇಂದ್ರ ಪ್ರಸಾದರ ಆದರ್ಶಗಳನ್ನು ತಿಳಿದು ಮಾತನಾಡುವರು.<br>• ಜಾಕಿರ್ ಹುಸೇನರ ವ್ಯಕ್ತಿತ್ವ, ಶಿಸ್ತು ಮತ್ತು ಆದರ್ಶ ಕರ್ತವ್ಯ ಬದ್ಧತೆ ತಿಳಿದು ಮಾತನಾಡುವರು. | • ರಾಷ್ಟ್ರಪತಿಗಳ ಭಾವಚಿತ್ರಗಳೊಂದಿಗೆ ಅವರ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸುವುದು.<br>• ಗದ್ಯ ಪಾಠದ ಮಾದರಿ ವಾಚನ<br>• ಶಿಕ್ಷಕರಿಂದ ಮಾದರಿ ಓದು ಮಕ್ಕಳಿಂದ ಓದಿಸುವುದು<br>• ಲೇಖಕರ ಪರಿಚಯ: ಬೆ.ಗೋ ರಮೇಶ್<br>• ನಾನು ಓದಿದ ಪುಸ್ತಕ<br>• ನಾನು ನೋಡಿದ ಜಾತ್ರೆ<br>• ನಮ್ಮ ಊರು<br>• ನನಗೆ ಇಷ್ಟವಾದ ವ್ಯಕ್ತಿ<br>ಇಂತಹ ವಿಷಯಗಳ ಕುರಿತು ಮಾತನಾಡಲು ಮಕ್ಕಳಿಗೆ ಅವಕಾಶ ಕಲ್ಪಿಸುವುದು.<br><br>ಗ್ರಂಥಾಲಯ ಪುಸ್ತಕ ಬಳಸಿಕೊಂಡು ಮಾಹಿತಿ ಸಂಗ್ರಹಿಸುವುದು. | ಯೋಜನೆ<br><br>ಗದ್ಯ ಪಾಠದ ಕೊನೆಯಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br><br>ಚಿತ್ರ ನೋಡಿ ಮಾತನಾಡು<br><br>• ಅಭ್ಯಾಸದ ಹಾಳೆ |

| ಕ್ರ.ಸಂ | ತಿಂಗಳು/ಪಾಠ | ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| | 27–08–2021 ರಿಂದ 29–08–2021 | ಮೊದಲನೆಯ ರೂಪಣಾತ್ಮಕ ಮೌಲ್ಯಮಾಪನ (ಎಫ್.ಎ –1) | ರೂಪಣಾತ್ಮಕ ಮೌಲ್ಯಮಾಪನವನ್ನು ಶಿಕ್ಷಕರು ಈ ಅವಧಿಯಲ್ಲಿ ಹಮ್ಮಿಕೊಳ್ಳುವುದು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸುವುದು. | |

## ಅಭ್ಯಾಸದ ಹಾಳೆ

**ಕನ್ನಡ–6** **ದೊಡ್ಡವರ ದಾರಿ (ಗದ್ಯಭಾಗ)**

**ಅ. ಕೆಳಗಿನ ಪದಗಳ ವಚನ ಬದಲಿಸಿ ಬರೆಯಿರಿ.**

ತಮ್ಮಂದಿರು – ಮಗು –

ಪತ್ರಗಳು – ಶಿಕ್ಷಕ –

**ಆ. ಕೆಳಗಿನ ಪದಗಳ ಲಿಂಗ ಬದಲಿಸಿ ಬರೆಯಿರಿ.**

ಅವನು – ಅವಳು

- ಶರಣ –
- ಭಕ್ತೆ –
- ಗೌಡತಿ –
- ವೈದ್ಯ –

**ಇ. ಬಿಟ್ಟ ಸ್ಥಳಗಳನ್ನ ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಭಾರತದ ಪ್ರ ಪ್ರಥಮ ರಾಷ್ಟ್ರಪತಿ ---------.
2. "ಶಿಸ್ತು ಮೂಡಿಸಿಕೂಳ್ಳಿ" ಎಂಬುದು ದೆಹಲಿಯಲ್ಲಿರುವ ----------.
3. 'ಜಾಮಿಯಾ ಮಿಲಿಯಾ' ಎಂಬುದು ದೆಹಲಿಯಲ್ಲಿರುವ ---------.
4. ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ದಿ ಕಲಿಸಲು -------- ವೇಷ ಹಾಕಿದರು.
5. ಪ್ರಸಾದರು ಮಕ್ಕಳಿಗೆಲ್ಲಾ ಅವರು ಹರಿದ ಪುಟಗಳಷ್ಟು --------- ಕೊಟ್ಟರು.

**ಈ. ಕೆಳಗಿನ ಪದಗಳನ್ನು ರೂಢ, ಅಂಕಿತ, ಅನ್ವರ್ಥನಾಮಗಳಾಗಿ ವಿಂಗಡಿಸಿ ಬರೆಯಿರಿ.**

| |
|---|
| ಮನೆ, ವೈದ್ಯ, ಮಹೇಶ, ಮೈಸೂರು, ಕೆರೆ, ಬೆಂಗಳೂರು, ಬಟ್ಟೆ, ಪ್ರಸಾದ್, ಶಿಕ್ಷಕ, ಕಿವುಡ, ಪುಸ್ತಕ, ಅಗಸ. |

ರೂಢನಾಮ ಅಂಕಿತನಾಮ ಅನ್ವರ್ಥನಾಮ

| ಮೊದಲನೇ ರೂಪಣಾತ್ಮಕ ಪರೀಕ್ಷೆ | ಸಿ.ಸಿ. ಅಡಿಯಲ್ಲಿ ನೀಡಬಹುದಾದ ಚಟುವಟಿಕೆಗಳು |
|---|---|
| ಶಿಕ್ಷಕರು ಮಕ್ಕಳಗೆ ಯೋಜನೆಯನ್ನು ನೀಡುವರು. | ಯೋಜನೆ, ನಿಯೋಜಿತ ಕಾರ್ಯ, ಅಭ್ಯಾಸ ಹಾಳೆ, ಕೃತಿ ಸಂಪುಟಗಳನ್ನು, ಚಟುವಟಿಕೆಗಳನ್ನು ಗಮನಿಸಿ ಪಠ್ಯವನ್ನಾದರಿಸಿ ಪುನರಾವರ್ತನೆ ಚಟುವಟಿಕೆಗಳನ್ನು ಮಾಡುವುದು. |